ಬೀದರ್ ಜಿಲ್ಲೆಯಲ್ಲಿ ಕೃಷಿಗೆ ಯೋಗ್ಯವಾದ ಭೂಮಿ

261(688); ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಬೀದರ್ ಜಿಲ್ಲೆಯಲ್ಲಿ ಕೃಷಿಗೆ ಯೋಗ್ಯವಾದ ಭೂಮಿ ಎಷ್ಟಿದೆ; (ತಾಲ್ಲೂಕುವಾರು ವಿವರ ನೀಡುವುದು);

ಆ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಎಷ್ಟು ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಉತ್ಪಾದಿಸಲಾಗಿದೆ; ಜಿಲ್ಲೆಯಲ್ಲಿ ಆಹಾರ ಧಾನ್ಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಲು ಸರ್ಕಾರ ಏನಾದರೂ ಯೋಜನೆಯನ್ನು ರೂಪಿಸಿದೆಯೇ; (ವಿವರ ನೀಡುವುದು);

ಇ) ಸರ್ಕಾರದ ವತಿಯಿಂದ ರಿಯಾಯಿತಿ ದರದಲ್ಲಿ ಬೀಜ, ರಸಗೊಬ್ಬರ ಮತ್ತು ಕೃಷಿ ಸಲಕರಣೆಗಳನ್ನು ಖರೀದಿಸಲು ಎಷ್ಟು ಸಬ್ಸಿಡಿ ಹಣ ನೀಡಲಾಗಿದೆ?

ಶ್ರೀ ಕೃಷ್ಣ ಭೈರೇಗೌಡ (ಕೃಷಿ ರಾಜ್ಯ ಸಚಿವರು)

ಅ) 2010–11ರ ಕೃಷಿ ಗಣತಿಯ ಪ್ರಕಾರ ಬೀದರ್ ಜಿಲ್ಲೆಯಲ್ಲಿ ಒಟ್ಟು ಕೃಷಿ ಭೂ ಹಿಡುವಳಿ ವಿಸ್ತೀರ್ಣ 4.52 ಲಕ್ಷ ಹೆಕ್ಟೇರ್ ಇರುತ್ತದೆ. ತಾಲ್ಲೂಕುವಾರು ವಿವರ ಈ ಕೆಳಕಂಡಂತಿರುತ್ತದೆ:

ಕ್ರ. ಸಂ.	ತಾಲ್ಲೂಕು	ವಿಸ್ತೀರ್ಣ (ಲಕ್ಷ ಹೆ.ಗಳಲ್ಲಿ)
1	ಔರಾದ್	1.11
2	ಬಸವಕಲ್ಯಾಣ	0.99
3	ಭಾಲ್ಕಿ	0.97
4	ಬೀದರ್	0.67
5	ಹುಮನಾಬಾದ್	0.78
	ಜಿಲ್ಲೆಯ ಒಟ್ಟು	**4.52**

ಆ) ಬೀದರ್ ಜಿಲ್ಲೆಯಲ್ಲಿ 2010–11ರಲ್ಲಿ 2.31 ಲಕ್ಷ ಟನ್, 2011–12ರಲ್ಲಿ 2.05 ಲಕ್ಷ ಟನ್ ಮತ್ತು 2012–13ರಲ್ಲಿ 3.03 ಲಕ್ಷ ಟನ್ ಆಹಾರ ಧಾನ್ಯಗಳ ಉತ್ಪಾದನೆಯಾಗಿರುತ್ತದೆ.

ಜಿಲ್ಲೆಯಲ್ಲಿ ಆಹಾರ ಧಾನ್ಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಲು ಸರ್ಕಾರ ವಿವಿಧ ಯೋಜನೆಗಳನ್ನು ರೂಪಿಸಿದೆ ವಿವರಗಳು ಈ ಕೆಳಕಂಡಂತಿವೆ.

1. ಭೂಚೇತನಾ ಕಾರ್ಯಕ್ರಮ
2. ಪ್ರಮಾಣಿತ/ಗುಣಮಟ್ಟದ ಬಿತ್ತನೆ ಬೀಜ ವಿತರಣಾ ಕಾರ್ಯಕ್ರಮ
3. ಮಣ್ಣಿನಸತ್ವ ಹೆಚ್ಚಿಸುವಿಕೆ ಕಾರ್ಯಕ್ರಮ:
4. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ:
5. ರಾಷ್ಟ್ರೀಯ ಸೂಕ್ಷ್ಮ ನೀರಾವರಿ ಅಭಿಯಾನ ಯೋಜನೆ:
6. ಸಮಗ್ರ ಎಣ್ಣೆಕಾಳು, ಮುಸುಕಿನಜೋಳ, ಆಯಿಲ್ ಪಾಮ್ ಅಭಿವೃದ್ಧಿ ಯೋಜನೆ (ಐಸೋಪಾಮ್):
7. ಸಸ್ಯ ಸಂರಕ್ಷಣಾ ಕಾರ್ಯಕ್ರಮ:
8. ಎನ್.ಎಫ್.ಎಸ್.ಎಂ–ಅಕ್ಕಿ, ಎನ್.ಎಫ್.ಎಸ್.ಎಂ–ದ್ವಿದಳಧಾನ್ಯ ಎನ್.ಎಫ್.ಎಸ್.ಎಂ–ಒರಟುಧಾನ್ಯ
9. ಕೃಷಿ ಯಾಂತ್ರೀಕರಣ ಯೋಜನೆ:

ಇ) **ಬಿತ್ತನೆ ಬೀಜ:**

2014–15ನೇ ಸಾಲಿನಲ್ಲಿ ರಿಯಾಯಿತಿ ದರದಲ್ಲಿ ಬೀಜ ವಿತರಣೆಗಾಗಿ, ಪ್ರಸ್ತುತ ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ ಯೋಜನೆಯಡಿ ` 315.00ಲಕ್ಷ ಹಾಗೂ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ–ಕರ್ನಾಟಕ ಸೀಡ್ ಮಿಷನ್‌ನಡಿ ` 483.00 ಲಕ್ಷಗಳು ಹೀಗೆ

ಒಟ್ಟಾರೆ, ` 798.00 ಲಕ್ಷಗಳನ್ನು ಬೀದರ್ ಜಿಲ್ಲೆಗೆ ಕಾಯ್ದಿರಿಸಲಾಗಿದೆ. ಅಲ್ಲದೆ, ಬೀದರ್ ಜಿಲ್ಲೆಯ ರೈತರಿಗೆ ಬೀಜ ವಿತರಣೆಗೆ ಹೆಚ್ಚಿನ ಅನುದಾನ ಬೇಕಾದಲ್ಲಿ ಅದರ ಪೂರೈಕೆಗಾಗಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ರಸಗೊಬ್ಬರ:

ರಾಜ್ಯ ಸರ್ಕಾರದ ವತಿಯಿಂದ ರಸಗೊಬ್ಬರಗಳಿಗೆ ಸಹಾಯಧನವನ್ನು ನೀಡಲಾಗುತ್ತಿಲ್ಲ. ರಸಗೊಬ್ಬರಗಳ ಬೆಲೆ ನಿಗಧಿ ಮತ್ತು ಸಹಾಯಧನ ನೀಡುವಿಕೆಯು ಕೇಂದ್ರ ಸರ್ಕಾರದ ನೀತಿ–ನಿಯಮಗಳಿಗೆ ಒಳಪಟ್ಟಿರುತ್ತದೆ. ದಿನಾಂಕ: 01.04.2010 ರಿಂದ ಕೇಂದ್ರ ಸರ್ಕಾರವು ಪೋಷಕಾಂಶ ಆಧಾರಿತ ಸಹಾಯಧನ ನೀತಿ (Nutrient Based Subsidy Policy) ಜಾರಿಗೆ ತಂದಿರುತ್ತದೆ. ಅದರನ್ವಯ ರಸಗೊಬ್ಬರಗಳ ಬೆಲೆಯನ್ನು ರಸಗೊಬ್ಬರ ತಯಾರಿಕಾ ಸಂಸ್ಥೆಗಳೇ ನಿಧರಿಸುವಂತೆ ಆದೇಶ ನೀಡಿರುತ್ತದೆ. ಕೇಂದ್ರ ಸರ್ಕಾರವೇ ಪೋಷಕಾಂಶಗಳ ಆಧಾರದ ಮೇಲೆ ರಿಯಾಯಿತಿ ದರವನ್ನು ನಿಗಧಿಪಡಿಸಿ ನೇರವಾಗಿ ರಸಗೊಬ್ಬರ ತಯಾರಿಕೆ ಸಂಸ್ಥೆಗಳಿಗೆ ನೀಡುತ್ತಿದ್ದು ರೈತರಿಗೆ ರಿಯಾಯಿತಿ ದರವನ್ನು ಹೊರತುಪಡಿಸಿ ನಂತರದ ಗರಿಷ್ಠ ಮಾರಾಟ ದರದಲ್ಲಿ ವಿತರಣೆಯಾಗುತ್ತಿದೆ.

ಕೃಷಿ ಸಲಕರಣೆಗಳು:

ಸರ್ಕಾರದ ವತಿಯಿಂದ ರಿಯಾಯಿತಿ ದರದಲ್ಲಿ ಕೃಷಿ ಸಲಕರಣೆಗಳನ್ನು ಖರೀದಿಸಲು 2013–14ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ` 1085.53 ಲಕ್ಷ ಸಹಾಯಧನ ಒದಗಿಸಲಾಗಿದೆ.